Download (GetImages.ashx?fn=http://indiamediamonitor.in/2021/10/24/Bengaluru/thumbnail/a20f9f18-7e3d-4f30-a5ad-1110c8189083thumbnail.jpg)

# ಎಲೆಕ್ಟ್ರಾನಿಕ್ ವಸ್ತು ಉತ್ಪಾದನಾ ಗುರಿ

**ಬೆಂಗಳೂರು:** ಭಾರತವು ಎಲೆಕ್ಟ್ರಾನಿಕ್ ಉತ್ಪಾದನಾ ಹಬ್ ಆಗಲು ಮತ್ತು ಜಾಗತಿಕ



ಮೌಲ್ಯಯುತ ಜಾಲದ ವಿಶ್ವಾಸಾರ್ಹ ದೇಶವಾಗುವ ಮಹತ್ವಾಕಾಂಕ್ಷೆ ಹೊಂದಿದೆ. ಇದಕ್ಕೆ ಅಗತ್ಯವಿರುವ ಪರಿಸರವನ್ನು ರಚಿಸಲು ಕಾರ್ಯನಿರತವಾಗಿದೆ ಎಂದು ಕೇಂದ್ರ ಐಟಿ ಇಲಾಖೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು. ಶನಿವಾರ ಪಬ್ಲಿಕ್ ಅಫೇರ್ಸ್ ಫೋರಂ ಆಫ್ ಇಂಡಿಯಾ ಏರ್ಪಡಿಸಿದ್ದ ಆರ್ಥಿಕತೆಯ ಪುನಶ್ಚೇತನ: ಪುನರ್‌ಕಲ್ಪನೆ, ರೀಬೂಟ್, ಸುಧಾರಣೆ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

**ನಿಖರ ನೀತಿ ರೂಪಿಸುವ ಹೊಣೆ:** ದೇಶವು 2014–15ರಲ್ಲಿ 1.8 ಲಕ್ಷ ಕೋಟಿ ರೂ. ಮೌಲ್ಯದ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಉತ್ಪಾದಿಸಿದೆ. ನಂತರದ ಐದು ವರ್ಷಗಳಲ್ಲಿ ಇದರ ಪ್ರಮಾಣ 5.5 ಲಕ್ಷ ಕೋಟಿ ರೂ. ತಲುಪಿದೆ. ನಾವು ನಿಖರವಾದ ನೀತಿಗಳನ್ನು ರೂಪಿಸಿರುವುದು ಮತ್ತು ಗುರಿಯನ್ನು ಇಟ್ಟುಕೊಂಡು ಬೆಳವಣಿಗೆಯನ್ನು ಕಂಡಿದ್ದೇವೆ. ವಿಶ್ವಾಸಾರ್ಹವಾದ ಮೌಲ್ಯಯುತ ಜಾಲದಲ್ಲಿ ನಾವು ಪ್ರಮುಖ ಪಾತ್ರವನ್ನು ವಹಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

**300 ಬಿಲಿಯನ್ ಡಾಲರ್ ಎಲೆಕ್ಟ್ರಾನಿಕ್ ಉತ್ಪನ್ನ:** ದೇಶವು 2024–25ರ ವೇಳೆಗೆ 250–300 ಯುಎಸ್‌ಡಿ ಬಿಲಿಯನ್ ಡಲಾರ್ ಮೊತ್ತದ ಎಲೆಕ್ಟ್ರಾನಿಕ್ ಉತ್ಪಾದನೆ ಹೊಂದುವ ಉದ್ದೇಶ ಹೊಂದಿದೆ. ಜಾಗತಿಕ ಮಾರುಕಟ್ಟೆಗೆ ಅತ್ಯಂತ ವಿಶ್ವಾಸಾರ್ಹವಾದ ಉತ್ಪನ್ನಗಳು ಮತ್ತು ಸೇವೆಗಳನ್ನು ಪೂರೈಸುವ ಪ್ರಮುಖ ದೇಶವಾಗಿ ಭಾರತ ಗುರುತಿಸಿಕೊಂಡಿದೆ. ಇಕ್ವಿಪ್‌ಮೆಂಟ್ ಮತ್ತು ಸಿಸ್ಟಂನಲ್ಲಿ ವಿಸ್ತರಣೆ ಯೋಜನೆಗಳನ್ನು ರೂಪಿಸುತ್ತಿದೆ. ಎಂದು ಹೇಳಿದರು.ಅಮೆಜಾನ್ ಇಂಡಿಯಾದ ಚೇತನ್ ಕೃಷ್ಣಸ್ವಾಮಿ, ಟ್ವಿಟರ್ ಇಂಡಿಯಾದ ಶುಗುಫ್ತಾ ಕಮ್ರಾನ್, ಆಪಲ್ ಇಂಡಿಯಾದ ಎಂಡಿ ವಿರಾಟ್ ಭಾಟಿಯಾ ಇದ್ದರು.